# ಹೂವು ಚೆಲುವೆಲ್ಲ ನಂದೆಂದಿತು ಗೋಸಂಪಿಗೆ

ವಿಶ್ವದ ವಿವಿಧ ಭಾಗಗಳಲ್ಲಿ ಪರಿಮಳ ಬೀರುತ್ತಿರುವ ಹೂವು ಹಲವು ಭಾವಗಳಿಗೆ, ನಂಬಿಕೆಗಳಿಗೆ ಕಾರಣವಾಗಿದೆ. ಈ ಚೆಲುವಿನ ಖನಿ ಸೌಂದರ್ಯದ ಗಣಿಯೂ ಹೌದು.

■ ಕೃಷ್ಣಪ್ರಭಾ ಎಂ.

ಗೋಸಂಪಿಗೆಗೆ ಎಷ್ಟೊಂದು ಹೆಸರು! ಗೋಳಸಂಪಿಗೆ, ಭೂತಸಂಪಿಗೆ, ನಾಯಿಸಂಪಿಗೆ, ದೇವಕಣಗಿಲೆ ಎಂದೆಲ್ಲಾ ಕರೆಸಿಕೊಳ್ಳುವ ಈ ಹೂವಿನ ಹೆಸರು ಊರಿನಿಂದ ಊರಿಗೆ ಬದಲಾಗುತ್ತದೆ. ಹೂವಷ್ಟೇ ಅಲ್ಲ, ಸಸ್ಯಕ್ಕೂ ಅಷ್ಟೇ – ಮಂದಿರ ಗಿಡ/ಮರ, ಪಗೋಡಾ ಮರ ಎಂದೆಲ್ಲಾ ಕರೆಯುತ್ತಾರೆ. ಹಿಂದಿಯಲ್ಲಿ ಚಂಪಾ, ಆಂಗ್ಲ ಭಾಷೆಯಲ್ಲಿ ಪ್ಲುಮೇರಿಯ. ವೈಜ್ಞಾನಿಕವಾಗಿ ಫ್ರಾಂಜಿಪಾನಿ ಎನ್ನುವ ಹೆಸರಿನ ಇದು, ಆಪೋಸೈನೇಸಿ ಕುಟುಂಬಕ್ಕೆ ಸೇರಿದೆ.

17ನೇ ಶತಮಾನದಲ್ಲಿ ವಿಶ್ವದೆಲ್ಲೆಡೆ ಸಂಚರಿಸಿ, ಜನರಿಗೆ ಪರಿಚಯವಿರದ ಅನೇಕ ಸಸ್ಯ ಹಾಗೂ ಪ್ರಾಣಿಗಳ ಬಗ್ಗೆ ದಾಖಲೀಕರಣ ಮಾಡಿದ ಫ್ರೆಂಚ್ ಸಸ್ಯಶಾಸ್ತ್ರಜ್ಞ ಚಾರ್ಲ್ಸ್ ಪ್ಲೂಮಿಯರ್ ಗೌರವಾರ್ಥ ಈ ಹೂವಿಗೆ 'ಪ್ಲುಮೇರಿಯ' ಎಂಬ ಹೆಸರು ಇಡಲಾಯಿತು. ಆದರೆ ಈ ಹೂಗಳ ಬಗ್ಗೆ ಮೊದಲು ವಿವರಣೆ ನೀಡಿದ್ದು ಪ್ಲೂಮಿಯರ್ ಅಲ್ಲ. ಕ್ರಿ.ಶ. 1522ರಲ್ಲಿಯೇ ಈ ಹೂವಿನ ಬಗ್ಗೆ ಸ್ಪೇನ್ ದೇಶದ ಫ್ರಾನ್ಸಿಸ್ಕೊ ಡ ಮೆಂಡೋಝಾರವರು ವಿವರಣೆ ನೀಡಿದ್ದರಂತೆ. ಇಟಲಿಯ 'ಮಾರ್ಕಿಸ್ ಫ್ರಾಂಜಿಪಾನಿ' ಎಂಬಾತ ಕೈಗವಸುಗಳಿಗೆ ಸಿಂಪಡಿಸಲೋಸುಗ ತಯಾರಿಸಿದ ಸುಗಂಧದ್ರವ್ಯದ ಪರಿಮಳವು ಹೂವಿನ ಪರಿಮಳವನ್ನು ಹೋಲುತ್ತಿದ್ದುದರಿಂದ ಹೂವಿಗೆ 'ಫ್ರಾಂಜಿಪಾನಿ' ಎಂಬ ಹೆಸರು ಬಂತಂತೆ.



ಬಿಳಿ, ತಿಳಿಹಳದಿ, ಕೆಂಪು, ಗಾಢ–ತಿಳಿಗುಲಾಬಿ, ಕೇಸರಿ, ಗಾಢ–ತಿಳಿನೇರಳೆ... ಹೀಗೆ ಹಲವು ಬಣ್ಣಗಳಲ್ಲಿ ಕಾಣ ಸಿಗುವ, ಐದು ಎಸಳುಗಳುಳ್ಳ ವಿಶಿಷ್ಟ ಸುವಾಸನಾಯುಕ್ತ ಹೂವಿದು. ಯಾವ ಬಣ್ಣವೇ ಇರಲಿ, ಎಸಳುಗಳ ಒಳಭಾಗದ ಮಧ್ಯೆ ಹಳದಿ ಬಣ್ಣ ಇರುವುದು ಹೂವಿನ ವೈಶಿಷ್ಟ್ಯ. ಮೆಕ್ಸಿಕೋ ಮತ್ತು ದಕ್ಷಿಣ ಅಮೆರಿಕ ದೇಶಗಳು ಈ ಸಸ್ಯದ ತವರು. ಆದರೂ ದಕ್ಷಿಣ ಏಷ್ಯಾದ ಎಲ್ಲಾ ದೇಶಗಳಲ್ಲಿ ಕಂಡುಬರುತ್ತದೆ.

ಮರದ ಕಾಂಡ ನೀರನ್ನು ಶೇಖರಿಸುವ ರೀತಿಯಲ್ಲಿ ಮಾರ್ಪಾಡುಗೊಂಡಿದೆ. ಕ್ಷಾಮದ ಸಂದರ್ಭದಲ್ಲಿಯೂ ಮರ ಬದುಕುಳಿಯಬಲ್ಲದು. ಅಧಿಕ ಉಷ್ಣತೆಯನ್ನು ಸಹಿಸಿಕೊಳ್ಳುವ ಗುಣವೂ ಈ ಮರಕ್ಕಿದೆ. ಗೆಲ್ಲಿನ ತುದಿಯಲ್ಲಿ ಮಾತ್ರ ಒತ್ತೊತ್ತಾಗಿ ಇರುವ ದಪ್ಪ ಎಲೆಗಳೆಡೆಯಲ್ಲಿ ಹೂವಿನ ಗೊಂಚಲುಗಳಿರುತ್ತವೆ. ಗಿಡದಿಂದ ಎಲೆ ಅಥವಾ ಹೂವು ಬೇರ್ಪಡಿಸಿದಾಗ ಸ್ವಲ್ಪ ಅಂಟಾದ ಹಾಲಿನಂತಹ ಬಿಳಿ ದ್ರವ ಹೊರಗೆ ಬರುತ್ತದೆ. ಮಕರಂದವಿಲ್ಲದಿದ್ದರೂ ಹೂವಿನ ವಿಶಿಷ್ಟ ಪರಿಮಳದಿಂದ ಆಕರ್ಷಿತಗೊಂಡು ರಾತ್ರಿ ಹೊತ್ತಿನಲ್ಲಿ ಚಟುವಟಿಕೆಯಿಂದಿರುವ ಚಿಟ್ಟೆಗಳು ಮಕರಂದದ ನಿರೀಕ್ಷೆಯಿಂದ ಹೂವಿನ ಬಳಿ ಬರುತ್ತವೆ. ಪಾಪ, ಅವುಗಳಿಗೆ ನಿರಾಸೆ ಕಾದಿರುತ್ತದೆ. ಪ್ರಯತ್ನ ಕೈಬಿಡದೆ, ನಿರೀಕ್ಷೆಯಿಂದ ಇನ್ನೊಂದು ಹೂವಿನ ಮೇಲೆ ಹಾರಿದಾಗ ಪರಾಗಸ್ಪರ್ಶ ಕ್ರಿಯೆ ನಡೆಯುವ ಪ್ರಕೃತಿಯ ಈ ಚಮತ್ಕಾರಕ್ಕೆ ತಲೆದೂಗಲೇಬೇಕು.

## ಹೂವೊಂದು, ನಂಬಿಕೆಗಳು ಹಲವು

ಕರ್ನಾಟಕದ ಪಶ್ಚಿಮ ಘಟ್ಟದ ತಪ್ಪಲಿನಲ್ಲಿರುವ ಹಲವು ಊರುಗಳ ದೇವಸ್ಥಾನಗಳಲ್ಲಿ ಈ ಹೂವಿನ ಮರವನ್ನು ಕಾಣಬಹುದು. ಇಲ್ಲಿಯ ಪ್ರದೇಶಗಳಲ್ಲಿ ಮದುವೆಗಳು ನಡೆದಾಗ ವಧೂವರರು ವಿನಿಮಯ ಮಾಡಿಕೊಳ್ಳುವ ಹೂವಿನ ಹಾರ ಕಡ್ಡಾಯವಾಗಿ ತಿಳಿಹಳದಿ ಬಣ್ಣದ ಗೋಸಂಪಿಗೆ

